# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು

ದಿನಾಂಕಃ 17 ನೇ ಫೆಬ್ರವರಿ ತಿಂಗಳು 2026ರಂದು

**ಸಿಸಿ ನಂ.1341/2025**

**ಫಿರ್ಯಾದುದಾರರುಃ** ಸರಕಾರ (ಹುಣಸೂರು ಪಟ್ಟಣ ಪೊಲೀಸರಿಂದ)

– ವಿರುದ್ಧ –

**ಆರೋಪಿಃ** ಅಭಿಷೇಕ್.

**ಶ್ರೀಮತಿ ಅನಿತ, ಬಿ.ಎ.(ಲಾ), ಎಲ್.ಎಲ್.ಬಿ., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹುಣಸೂರು ಆದ ನಾನು ಈ ಕೆಳಗೆ ಕಾಣಿಸಿರುವಃ**

ಅಭಿಷೇಕ್., ಬಿನ್ ಈಶ್ವರ ರಾವ್,
24 ವರ್ಷ, ವ್ಯಾಪಾರಸ್ಥರು,
ವಾಸಃ ನರಸಿಂಹಸ್ವಾಮಿ ಬಡಾವಣೆ,
ಹುಣಸೂರು ಟೌನ್.

## ದೋಷಾರೋಪಣೆ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 24.09.2025ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದಾದ ಹುಣಸೂರು – ಕೆ.ಆರ್.ನಗರ ರಸ್ತೆಯ ಕಲ್ಕುಣಿಕೆ ಬೈಪಾಸ್ ರಸ್ತೆ ರಂಗನಾಥ ಬಡಾವಣೆಯಲ್ಲಿರುವ ಶ್ರೀ ಶನಿದೇವರ ದೇವಸ್ಥಾನದ ಮುಂಭಾಗ ಚಾಸಾ.2ಮನೋಜ್ ರವರನ್ನು ಆರೋಪಿಯಾದ ನೀವು ಕೆಎ–45/ಈಎಫ್–3018 ಹೋಂಡಾ ಆಕ್ಟೀವ್ ಬೈಕ್ ನಲ್ಲಿ ಹಿಂದೆ ಕೂರಿಸಿಕೊಂಡು ಹುಣಸೂರಿನಿಂದ ಕೆ.ಆರ್.ನಗರದ ಕಡೆಗೆ ಬೈಕ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ

ಮಾಡಿಕೊಂಡು ಬಂದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ ಇರುವ ಗುಂಡಿಗೆ ಬೈಕ್ ನ್ನು ಬಿಟ್ಟಾಗ ಆಯತಪ್ಪಿ ಬೈಕ್ ಸಮೇತ ಇಬ್ಬರು ಕೆಳಕ್ಕೆ ಬಿದ್ದಾಗ ನಿಮ್ಮ ಹಿಂದೆ ಕುಳಿತ್ತಿದ್ದ ಚಾಸಾ.2ರವರ ಬಲಕಾಲಿನ ಹಿಮ್ಮಡಿ ಹತ್ತಿರ ಪೆಟ್ಟಾಗಿ ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

ANITHA

Digitally signed by ANITHA
Date: 2026.02.17 18:02:41 +0530

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂ., ಹುಣಸೂರು.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು.**

**ಸಿಸಿ ನಂ.1341/2025**

**ಆರೋಪಿ ನಂ.1**

ಆಪಾದಿತನ ಹೆಸರು : ಅಭಿಷೇಕ್.,
ತಂದೆಯ ಹೆಸರು : ಈಶ್ವರ ರಾವ್,
ವಯಸ್ಸು : 24 ವರ್ಷ,
ಉದ್ಯೋಗ : ವ್ಯಾಪಾರಸ್ಥರು
ವಾಸಸ್ಥಳ : ನರಸಿಂಹಸ್ವಾಮಿ ಬಡಾವಣೆ,
ಹುಣಸೂರು ಟೌನ್.

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 234ರ ಅಡಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1 : | ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆ 2 : | ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ? |
| ಉತ್ತರಃ | ತಪ್ಪು ಒಪ್ಪಿಕೊಳ್ಳುತ್ತೇನೆ. |

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ 17.02.2026 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ANITHA Digitally signed by ANITHA Date: 2026.02.17 18:02:47 +0530

Sd/-
(ಅನಿತ)
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಹುಣಸೂರು.**

**ಆರೋಪಿಯ ಸಹಿಃ**